# ಕರ್ನಾಟಕ ಸರ್ಕಾರ
# ಜಿಲ್ಲಾಡಳಿತ, ಮೈಸೂರು ಜಿಲ್ಲೆ

## ಚಾಮುಂಡಿ ಬೆಟ್ಟಕ್ಕೆ ಕಮಾನುಗಳ ವಿನ್ಯಾಸದ ಸ್ಪರ್ಧೆ
## Competition for Entrance Arch Design

ದಿನಾಂಕ: 22.11.2019

ಉಪನಿರ್ದೇಶಕರ ಕಛೇರಿ
ಪ್ರವಾಸೋದ್ಯಮ ಇಲಾಖೆ, ಕರ್ನಾಟಕ ಸರ್ಕಾರ
ಮೊದಲನೇ ಮಹಡಿ, ಹೊಟೇಲ್ ಮಯೂರ ಹೊಯ್ಸಳ,
#2, ಜೆ.ಎಲ್.ಬಿ ರಸ್ತೆ, ಮೈಸೂರು
ದೂರವಾಣಿ ಸಂಖ್ಯೆ: 0821–2422096

ಇ–ಮೇಲ್: ddtourismmysore@gmail.com

ಕೇಂದ್ರ ಸರ್ಕಾರದ ಪ್ರಸಾದ್ (PRASAD) ಯೋಜನೆಯಡಿ ಚಾಮುಂಡಿ ಬೆಟ್ಟದಲ್ಲಿ ಭಕ್ತಾಧಿಗಳಿಗೆ ಹಾಗೂ ಪ್ರವಾಸಿಗರಿಗೆ ಪ್ರವಾಸಿ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲು ಉದ್ದೇಶಿಸಲಾಗಿದ್ದು, ಅದರನ್ವಯ ಬೆಟ್ಟಕ್ಕೆ ತೆರಳುವ ರಸ್ತೆಗಳಲ್ಲಿ ಹಾಗೂ ಬೆಟ್ಟದಲ್ಲಿ ಕಮಾನುಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದ್ದು, ಈ ಸಂಬಂಧ ಆಸಕ್ತರಿಂದ ಮೈಸೂರು ಶೈಲಿಯ/ವಾಸ್ತುಶಿಲ್ಪದ ಹಾಗೂ ಧಾರ್ಮಿಕ ಶೈಲಿಯ ಕಮಾನು ನಿರ್ಮಾಣದ ಬಗ್ಗೆ ಪ್ರಸ್ತಾವನೆಗಳನ್ನು ಆಹ್ವಾನಿಸಿದೆ.

### 1.1 ಸಲ್ಲಿಕೆಯ ವಿವರಗಳು

1. ಅರ್ಜಿಗಳನ್ನು www.mysore.nic.in ಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ.
2. ನಿಗದಿತ ನಮೂದುಗಳನ್ನು ddtourismmysore@gmail.com ಇ-ಮೇಲ್ ಮೂಲಕ ಅಥವಾ ಪ್ರವಾಸೋದ್ಯಮ ಕಛೇರಿಗೆ ಸಲ್ಲಿಸುವುದು.ಪ್ರಸ್ತಾವನೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ 09.12.2019 ಒಳಗಾಗಿ ಸಲ್ಲಿಸುವುದು. ಪುಟ 1 ರಲ್ಲಿ ಸಲ್ಲಿಸುವವರ ವಿವರ/ಸಂಸ್ಥೆಯ ವಿವರ ವಿಳಾಸಗಳನ್ನೊಳಗೊಂಡಿರಬೇಕು.(ಭಾವಚಿತ್ರ ಮತ್ತು ವಿಳಾಸದ ಪ್ರತಿ,ಹುಟ್ಟಿದ ದಿನಾಂಕ, ಮೊಬೈಲ್ ಸಂಖ್ಯೆ, ಇ-ಮೇಲ್ ವಿಳಾಸ ಸಲ್ಲಿಸುವುದು) ಮತ್ತು ಪುಟ 2 ರಲ್ಲಿ ಪ್ರಸ್ತಾವನೆಯ ಬಗ್ಗೆ ವ್ಯಾಖ್ಯಾನ : ಕನ್ನಡ ಮತ್ತು ಇಂಗ್ಲೀಷ್ ಎರಡೂ ಭಾಷೆಗಳಲ್ಲಿಯೂ ತಾರ್ಕಿಕ ವ್ಯಾಖ್ಯಾನ ನೀಡುವುದು.(200 ಕ್ಕಿಂತ ಹೆಚ್ಚು ಪದಗಳನ್ನು ಮೀರಿರಬಾರದು).

ಹೆಚ್ಚಿನ ಸ್ಪಷ್ಟೀಕರಣ ಬೇಕಾದಲ್ಲಿ ಈ ಕೆಳಗಿನ ವಿಳಾಸದಲ್ಲಿ ಪಡೆಯಬಹುದಾಗಿದೆ

ಉಪನಿರ್ದೇಶಕರ ಕಛೇರಿ
ಪ್ರವಾಸೋದ್ಯಮ ಇಲಾಖೆ, ಕರ್ನಾಟಕ ಸರ್ಕಾರ
ಮೊದಲನೇ ಮಹಡಿ, ಹೊಟೇಲ್ ಮಯೂರ ಹೊಯ್ಸಳ,
#2, ಜೆ.ಎಲ್.ಬಿ ರಸ್ತೆ, ಮೈಸೂರು
ದೂರವಾಣಿ ಸಂಖ್ಯೆ: 0821-2422096
ಇ-ಮೇಲ್: ddtourismmysore@gmail.com

### 1.2 ವಿವರಣೆ

ಚಾಮುಂಡಿ ಬೆಟ್ಟದಲ್ಲಿ ಹಾಗೂ ಬೆಟ್ಟಕ್ಕೆ ತೆರಳುವ ರಸ್ತೆಗಳಲ್ಲಿ ವಿವಿಧ ಗಾತ್ರದ ಹಾಗೂ ವಿವಿಧ ಶೈಲಿಯ ಅತ್ಯಾಕರ್ಷಕ ಕಮಾನುಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದ್ದು, ಆಸಕ್ತ ವ್ಯಕ್ತಿಗಳಿಂದ/ ಸಂಘಟನೆಗಳಿಂದ ಕಮಾನುಗಳ ನಿರ್ಮಾಣಕ್ಕೆ ಸಂಬಂಧಿಸಿದಂತೆ ಈ ಕೆಳಕಂಡಂತೆ ಪ್ರಸ್ತಾವನೆಗಳನ್ನು ಆಹ್ವಾನಿಸಲಾಗಿದೆ.

- Design/ Conceptual Plan -along with Technical Viability, 3 D Drawings, & Specifications

### 1.3 ನಿಯಮಗಳು ಮತ್ತು ಷರತ್ತುಗಳು

1. ತಮ್ಮ ನಮೂದುಗಳನ್ನು ಸಲ್ಲಿಸಲು ಕೊನೆಯ ದಿನಾಂಕ 09.12.2019 ಸಮಯ 5.00 ಗಂಟೆ.ಸದರಿ ದಿನಾಂಕದಂದು 5.00 ಗಂಟೆಯ ನಂತರ ಯಾವುದೇ ನಮೂದುಗಳನ್ನು ಸ್ವೀಕರಿಸಲಾಗುವುದಿಲ್ಲ.

2. ನಮೂದುಗಳು ಯಾವುದೇ ಧಾರ್ಮಿಕ ಭಾವನೆಗಳನ್ನು ನೋಯಿಸುವಂತಿರಬಾರದು.

3. ಭಾರತೀಯ ಪ್ರಜೆಗಳು ಮಾತ್ರ ಈ ಸ್ಪರ್ಧೆಯಲ್ಲಿ ಭಾಗವಹಿಸಲು ಅರ್ಹರಾಗಿರುತ್ತಾರೆ.

4. ವಯೋಮಾನದ ಮಿತಿ ಇರುವುದಿಲ್ಲ.

5. ಒಬ್ಬ ವ್ಯಕ್ತಿ, ಗುಂಪು, ಸಂಘಟನೆ/ಸಂಸ್ಥೆ ಸ್ಪರ್ಧಿಸಲು ಅರ್ಹರಾಗಿರುತ್ತಾರೆ.

6. ಯಾವುದೇ ಭತ್ಯೆ ಹಾಗೂ ಶುಲ್ಕಗಳನ್ನು ನೀಡಲಾಗುವುದಿಲ್ಲ. ಅಂತಿಮವಾಗಿ ಆಯ್ಕೆಯಾಗುವ ವಿನ್ಯಾಸ ರಚನೆ ಮಾಡಿದವರಿಗೆ ಜಿಲ್ಲಾಡಳಿತದ ವತಿಯಿಂದ ಬಹುಮಾನ ನೀಡಲಾಗುವುದು.

## 1.4 ವಿನ್ಯಾಸ ಪರಿಗಣನೆ

1. ವಿನ್ಯಾಸವು ಚಾಮುಂಡಿ ಬೆಟ್ಟವನ್ನು ಧಾರ್ಮಿಕ ಪ್ರವಾಸಿ ತಾಣವನ್ನಾಗಿ ಪ್ರತಿಬಿಂಬಿಸುವಂತಿರಬೇಕು. ಮೈಸೂರು ವಾಸ್ತಿಶಿಲ್ಪ ಹಾಗೂ ಧಾರ್ಮಿಕ ಶೈಲಿಯಲ್ಲಿರಬೇಕು.

2. ವಿನ್ಯಾಸವು ಪಿ.ಡಿ.ಎಫ್/ಜೆ.ಪಿ.ಜೆ/ಪಿ.ಎನ್.ಜಿ ಸ್ವರೂಪದಲ್ಲಿತಕ್ಕದ್ದು. ಪರದೆಯ ಮೇಲೆ ನೋಡಿದಾಗ ಸ್ವಚ್ಛವಾಗಿ ಕಾಣಿಸತಕ್ಕದ್ದು ಅಥವಾ ಹಾರ್ಡ್ ಕಾಪಿಯಲ್ಲಿ ಸಲ್ಲಿಸಬಹುದಾಗಿದೆ.

3. ಪರಿಕಲ್ಪನೆ ವಿವರ 200 ಪದಗಳನ್ನು ಮೀರಬಾರದು, ಕನ್ನಡ/ ಇಂಗ್ಲೀಷ್ ನಲ್ಲಿ ಇರತಕ್ಕದ್ದು.

## 2. ನಮೂದುಗಳನ್ನು ತಯಾರಿಸಲು ಮಾರ್ಗದರ್ಶನಗಳು

### 2.1 ಇತರೆ ಷರತ್ತುಗಳು

1. ಒಂದು ಭಾರಿ ಸ್ವೀಕರಿಸಿದ ನಮೂದುಗಳನ್ನು ಹಿಂತಿರುಗಿಸಲಾಗುವುದಿಲ್ಲ.

2. ಅಂತಿಮವಾಗಿ ಆಯ್ಕೆಯಾದ ವಿನ್ಯಾಸವು/ಪರಿಕಲ್ಪನೆಯು ಮೈಸೂರು ಜಿಲ್ಲಾಡಳಿತದ ಬೌದ್ಧಿಕ ಆಸ್ತಿಯಾಗಿರುತ್ತದೆ ಮತ್ತು ಅದರ ಮೇಲೆ ಭಾಗವಹಿಸಿದವರು ಯಾವುದೇ ಹಕ್ಕನ್ನು ಹೊಂದಿರುವುದಿಲ್ಲ.

3. ಅಂತಿಮ ವಿನ್ಯಾಸಕ್ಕೆ ಸಂಬಂಧಿಸಿದ ಮಾರ್ಗದರ್ಶಿಗಳು ಮತ್ತು ಇತರೆ ಷರತ್ತುಗಳು ಸ್ಪರ್ಧಿಯ ಜವಾಬ್ದಾರಿಯಾಗಿರುತ್ತವೆ. ಇದಕ್ಕೆ ಸಂಬಂಧಿಸಿದಂತೆ ಮೂರನೇ ವ್ಯಕ್ತಿಯು ವಿವಾದ ಉಂಟು ಮಾಡಿದ್ದಲ್ಲಿ ಮೈಸೂರು ಜಿಲ್ಲಾಡಳಿತ ಜವಾಬ್ದಾರಿಯಾಗುವುದಿಲ್ಲ.

4. ವಿನ್ಯಾಸವು ಮೂಲವಾಗಿರಬೇಕು, India copy right ಕಾಯ್ದೆ 1957 ನ್ನು ಉಲ್ಲಂಘಿಸುವಂತಿಲ್ಲ. ಇಲ್ಲಿ ಸಲ್ಲಿಸಿರುವ ಪರಿಕಲ್ಪನೆಯನ್ನು ಇನ್ನಾವುದೇ ಸ್ಪರ್ಧೆಗಳಲ್ಲಿ ಬಳಸುವಂತಿಲ್ಲ. ವಿನ್ಯಾಸಕ್ಕೆ ಸಂಬಂಧಿಸಿದ ಯಾವುದೇ ರೀತಿಯ ಹೋಲಿಕೆಗೆ ಸಂಬಂಧಿಸಿದ ದೂರುಗಳು ಬಂದಲ್ಲಿ ಸಲ್ಲಿಸಿದ ವ್ಯಕ್ತಿ/ಸಂಘಟನೆ ತನ್ನ ಅಧಿಕೃತ ವಿನ್ಯಾಸದ ಬಗ್ಗೆ ಜವಾಬ್ದಾರರಾಗಿರುತ್ತಾರೆ. ಆಯ್ಕೆಯಾದ ವಿನ್ಯಾಸವನ್ನು ಜಿಲ್ಲಾಡಳಿತ, ಮೈಸೂರು ರವರು ನಿಯಂತ್ರಕರು, ಪೇಟೆಂಟ್ಸ್, ವಿನ್ಯಾಸ ಹಾಗೂ ಟ್ರೇಡ್‌ಮಾರ್ಕ್, ಮುಂಬೈ ನಲ್ಲಿ ಜಿಲ್ಲಾಡಳಿತ, ಮೈಸೂರು ರವರ ಹೆಸರಿನಲ್ಲಿ ನೋಂದಾವಣೆ ಮಾಡಿಸಲಾಗುವುದು.

5. ಅಂತಿಮವಾಗಿ ವಿಜೇತ ವಿನ್ಯಾಸದ ಸಂಪೂರ್ಣ ಹಕ್ಕು ಮೈಸೂರು ಜಿಲ್ಲಾಡಳಿತಕ್ಕೆ ಇರುತ್ತದೆ. ವಿನ್ಯಾಸವನ್ನು ಇಲಾಖೆಯು ತನ್ನ ಪ್ರಚಾರ ಕಾರ್ಯಗಳಿಗಾಗಿ, ಪ್ರಕಟಣೆಗಾಗಿ ಉಪಯೋಗಿಸುವ ಹಕ್ಕನ್ನು ಹೊಂದಿದೆ.

6. ಅಂತಿಮವಾಗಿ ವಿಜೇತವಾದ ವಿನ್ಯಾಸವನ್ನು ಮರು ಸಂಸ್ಕರಿಸುವ ಅಥವಾ ಸುಧಾರಣೆ ಮಾಡುವ ಹಕ್ಕನ್ನು ಮೈಸೂರು ಜಿಲ್ಲಾಡಳಿತ ಹೊಂದಿರುತ್ತದೆ.

7. ಸೂಚಿಸಿರುವ ಮಾರ್ಗದರ್ಶಿಗಳ ಅನ್ವಯ ಅಥವಾ ಷರತ್ತುಗಳ ಅನ್ವಯ ವಿನ್ಯಾಸ ಇಲ್ಲದಿದ್ದಲ್ಲಿ ಯಾವುದೇ ಸ್ಪರ್ಧಿಯನ್ನು ಆಯ್ಕೆ ಮಾಡದಿರುವ ಹಕ್ಕು ಜಿಲ್ಲಾಡಳಿತಕ್ಕೆ ಇರುತ್ತದೆ.

8. ವಿನ್ಯಾಸದ ನಮೂದುಗಳನ್ನು ಅನರ್ಹಗೊಳಿಸುವ ಹಕ್ಕನ್ನು ಜಿಲ್ಲಾಡಳಿತದ ವಿವೇಚನೆಗೆ ಒಳಪಟ್ಟಿರುತ್ತದೆ.

## 2.2 ಆಯ್ಕೆ ಪ್ರಕ್ರಿಯೆ

1.ಈ ವಿಶೇಷ ಉದ್ದೇಶಕ್ಕೆ ರಚಿಸಲಾದ ಉನ್ನತಾಧಿಕಾರ ಸಮಿತಿಯು ವಿಜೇತರನ್ನು ಆಯ್ಕೆ ಮಾಡಲಿದ್ದು, ಒಂದು ಅಥವಾ ಹೆಚ್ಚಿನ ಪ್ರಸ್ತಾವನೆಗಳನ್ನು ಪೂರ್ಣವಾಗಿ ಅಥವಾ ವಿಭಜಿಸಿ ಆಯ್ಕೆ ಮಾಡುವ ಹಕ್ಕನ್ನು ಹೊಂದಿದ್ದು, ಅಂತಿಮ ವಿಜೇತರ ಹೆಸರನ್ನು ವಿವಿಧ ಮಾಧ್ಯಮಗಳ ಮೂಲಕ ಪ್ರಕಟಿಸಲಾಗುವುದು. ಸಮಿತಿಯ ತೀರ್ಮಾನದ ಅನ್ವಯ ಬಹುಮಾನ ನೀಡಲಾಗುವುದು.

2. ಯಾವುದೇ ರೀತಿಯ ಕೃತಿಚೌರ್ಯಕ್ಕೆ ಅವಕಾಶವಿರುವುದಿಲ್ಲ

3. ಮಾರ್ಗಸೂಚಿಗಳು ಮತ್ತು ಷರತ್ತುಗಳ ಅನುಸರಿಸುವಿಕೆಗೆ ಆಸಕ್ತರು ಜವಾಬ್ದಾರರಾಗಿರುತ್ತಾರೆ. ಮೂರನೇ ವ್ಯಕ್ತಿಯ ವಿವಾದಕ್ಕೆ ಜಿಲ್ಲಾಡಳಿತ ಜವಾಬ್ದಾರಿಯಾಗಿರುವುದಿಲ್ಲ. ನಮೂದು ಸರಿಯಾಗಿಲ್ಲದಿದ್ದ ಪಕ್ಷದಲ್ಲಿ ಯಾವುದೇ ಕಾರಣವನ್ನು ಅಭ್ಯರ್ಥಿಗೆ ನೀಡದೇ ತಿರಸ್ಕೃತಗೊಳಿಸಲಾಗುತ್ತದೆ.

4. ಅಂತಿಮವಾಗಿ ವಿಜೇತರಾದವರು ಸಂಬಂಧಿಸಿದ ದಾಖಲೆಗಳನ್ನು ಜಿಲ್ಲಾಡಳಿತ, ಮೈಸೂರು ಜಿಲ್ಲೆಗೆ ಒದಗಿಸಬೇಕಾಗುತ್ತದೆ.

5. ಆಸಕ್ತರು ತನ್ನ ಎಲ್ಲಾ ವಿವರಗಳನ್ನು ಮತ್ತು ದಾಖಲೆಗಳನ್ನು ಜಿಲ್ಲಾಡಳಿತಕ್ಕೆ ಹೆಚ್ಚಿನ ಸಂವಹನಕ್ಕಾಗಿ ಸಲ್ಲಿಸಬೇಕಾಗುತ್ತದೆ. ಸ್ಪರ್ಧಿಯ ಹೆಸರು, ಭಾವಚಿತ್ರ, ದೂರವಾಣಿ ಸಂಖ್ಯೆ ಹಾಗೂ ವಿನ್ಯಾಸಕ್ಕೆ ಸಂಬಂಧಿಸಿದ ದಾಖಲೆಗಳನ್ನು ಸಲ್ಲಿಸಬೇಕಾಗುತ್ತದೆ.

## 2.3 ಬೌದ್ಧಿಕ ಆಸ್ತಿಯ ಹಕ್ಕು

1. ವಿನ್ಯಾಸಕ್ಕೆ ಸಂಬಂಧಿಸಿದ ಎಲ್ಲಾ ನಮೂದುಗಳು ಮೈಸೂರು ಜಿಲ್ಲಾಡಳಿತ ಆಸ್ತಿಯಾಗಿರುತ್ತವೆ ಮತ್ತು ಈ ನಮೂದುಗಳನ್ನು ಹಿಂದಿರಿಗಿಸಲಾಗುವುದಿಲ್ಲ.

2. ವಿಜೇತರಾದವರು ತಮ್ಮ ವಿನ್ಯಾಸದ ಮೂಲ ನಮೂದನ್ನು ಮೈಸೂರು ಜಿಲ್ಲಾಡಳಿತಕ್ಕೆ ಸಲ್ಲಿಸಬೇಕಾಗುತ್ತದೆ. ಒಂದು ವೇಳೆ ಕೈಬರಹದ ಸ್ಕೆಚ್ ಇದ್ದಲ್ಲಿ ಅದನ್ನೂ ಕೂಡ ಜಿಲ್ಲಾಡಳಿತಕ್ಕೆ ಸಲ್ಲಿಸಬೇಕಾಗುತ್ತದೆ.

3. ವಿಜೇತ ಸ್ಪರ್ಧಿಯ ವಿನ್ಯಾಸದ ಕೃತಿಸ್ವಾಮ್ಯ ಮೈಸೂರು ಜಿಲ್ಲಾಡಳಿತದ ಸ್ವಂತ ಆಸ್ತಿ ಎಂದು ಪರಿಗಣಿಸಲಾಗುವುದು. ಯಾವುದೇ ಸ್ಪರ್ಧಿ ವಿಜೇತರಾಗಿದ್ದಲ್ಲಿ ಅವರ ಲೋಗೋ ವಿನ್ಯಾಸದ ಕೃತಿಸ್ವಾಮ್ಯ ಮೈಸೂರು ಜಿಲ್ಲಾಡಳಿತಕ್ಕಿರುತ್ತದೆ ಮತ್ತು ಅದನ್ನು ಮರುವಿನ್ಯಾಸ ಮಾಡುವ ಹಕ್ಕು ಜಿಲ್ಲಾಡಳಿತಕ್ಕಿರುತ್ತದೆ.

4. ಸ್ಪರ್ಧಿಯ ವಿನ್ಯಾಸ ,ಅವರ ಮೂಲ ಕೆಲಸ ಅವರ ಬೌದ್ಧಿಕ ಆಸ್ತಿಯಾಗಿರುತ್ತದೆ.ಮೂರನೇ ವ್ಯಕ್ತಿ ಇದನ್ನು ನಕಲು ಮಾಡಿದ್ದಲ್ಲಿ ಆ ವ್ಯಕ್ತಿಯು ಸ್ಪರ್ದೆಯಿಂದ ಅನರ್ಹಗೊಳ್ಳುತ್ತಾರೆ.ಇಂತಹ ಯಾವುದೇ ನಕಲು ವಿನ್ಯಾಸಗಳ ಅನರ್ಹತೆಗೆ ಸ್ಪರ್ಧಿಗಳೇ ಜವಾಬ್ದಾರರು, ಕೃತಿಸ್ವಾಮ್ಯ ಉಲ್ಲಂಘನೆಗೆ ಮೈಸೂರು ಜಿಲ್ಲಾಡಳಿತ ಜವಾಬ್ದಾರಿಯಾಗಿರುವುದಿಲ್ಲ.

## 2.4 ಮೌಲ್ಯಮಾಪನ ಪ್ರಕ್ರಿಯೆ

1. ವಿಶೇಷ ಉನ್ನತಾಧಿಕಾರ ಸಮಿತಿಯು ಆಸಕ್ತರ ನಮೂದುಗಳನ್ನು ಸ್ವೀಕರಿಸಿ,ಪರಿಶೀಲಿಸಿ ಮೌಲ್ಯಮಾಪನ ಮಾಡಿ ಅಂತಿಮ ವಿನ್ಯಾಸ/ವಿಜೇತರನ್ನು ಆಯ್ಕೆ ಮಾಡಲಿದೆ.

2. ಆಸಕ್ತರ ಸೃಜನಶೀಲತೆ, ಮೂಲ ತಾಂತ್ರಿಕ ಪರಿಣಿತಿ, ಸರಳತೆ, ಕಲೆ, ದೃಶ್ಯ ಪರಿಣಾಮ ಮತ್ತು ಆಸಕ್ತರು ಹೇಗೆ ಕಮಾನಿನ ನಿರ್ಮಾಣದ ವಿನ್ಯಾಸ ತೋರಿಸುತ್ತಾರೆ ಎಂಬ ಅಂಶಗಳನ್ನು ಗಮನದಲ್ಲಿರಿಸಿಕೊಂಡು ವಿಜೇತರ ಆಯ್ಕೆಯನ್ನು ನಿರ್ಧರಿಸಲಾಗುತ್ತದೆ.

3. ಆಯ್ಕೆ ಸಮಿತಿಯ ನಿರ್ಧಾರವೇ ಅಂತಿಮವಾಗಿರುತ್ತದೆ, ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಭಾಗವಹಿಸಿದವರಿಗೆ ಯಾವುದೇ ಸ್ಪಷ್ಟೀಕರಣ ನೀಡಲಾಗುವುದಿಲ್ಲ.

4. ಈ ಸ್ಪರ್ದೆಗೆ ಸಂಬಂಧಿಸಿದಂತೆ ಯಾವುದೇ ರೀತಿಯ ಕಾನೂನು ನಡವಳಿಗಳು/ಅಡೆತಡೆಗಳು ಉಂಟಾದಲ್ಲಿ/ವಿನ್ಯಾಸಕ್ಕೆ ಸಂಬಂಧಿಸಿದಂತೆ ಅಡೆತಡೆಗಳುಂಟಾದಲ್ಲಿ ಮೈಸೂರು ಸ್ಥಳೀಯ ನ್ಯಾಯಾಲಯಕ್ಕೆ ಸ್ಪರ್ಧಿಗಳೇ ನೇರ ಹೊಣೆಗಾರರಾಗಿರುತ್ತಾರೆ.

**ಅರ್ಜಿ ನಮೂನೆ 1**

1. ಹೆಸರು/ಸಂಘಟನೆ ಅಥವಾ ಸಂಸ್ಥೆಯ ಹೆಸರು/ಗುಂಪಿನ ಮುಖ್ಯಸ್ಥರ ಹೆಸರು:
2. ಮನೆ ವಿಳಾಸ/ಕಛೇರಿ ವಿಳಾಸ:
3. ದೂರವಾಣಿ/ಮೊಬೈಲ್ ಸಂಖ್ಯೆ:
4. ಇ–ಮೇಲ್ ವಿಳಾಸ:
5. ಆಧಾರ್/ಪಾನ್/ಚುನಾವಣಾ ಗುರುತಿನ ಚೀಟಿ/ಟ್ಯಾನ್ ಸಂಖ್ಯೆ:

ಇತ್ತೀಚಿನ
ಭಾವಚಿತ್ರ

ದೃಢೀಕರಣ: ನಾನು/ಸಂಸ್ಥೆ/ಗುಂಪಿನ ಮುಖ್ಯಸ್ಥ ವಿನ್ಯಾಸ ಮಾಡಿದ ಪರಿಕಲ್ಪನೆಗಳು ಮತ್ತು ನಮೂದುಗಳು ವಿಜೇತರಾಗಿದ್ದಲ್ಲಿ ಕೃತಿ ಸ್ವಾಮ್ಯದ ಹಕ್ಕು ಸಂಪೂರ್ಣವಾಗಿ ಮೈಸೂರು ಜಿಲ್ಲಾಡಳಿತದ ಆಸ್ತಿಯಾಗಿರುತ್ತದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ಒಂದು ಪಕ್ಷ ವಿನ್ಯಾಸ ಅಂತಿಮವಾಗಿ ಆಯ್ಕೆಯಾಗಿದ್ದಲ್ಲಿ ಮೈಸೂರು ಜಿಲ್ಲಾಡಳಿತ ನೀಡುವ ಬಹುಮಾನವನ್ನು ಮಾತ್ರ ತೆಗೆದುಕೊಳ್ಳುತ್ತೇನೆ ಹಾಗೂ ಯಾವುದೇ ರೀತಿಯ ಹೆಚ್ಚಿನ ಬಹುಮಾನವನ್ನು ಅಪೇಕ್ಷಿಸುವುದಿಲ್ಲ, ವಿನ್ಯಾಸಕ್ಕೆ ಸಂಬಂಧಿಸಿದ ಬೌದ್ಧಿಕ ಆಸ್ತಿ/ಕೃತಿಸ್ವಾಮ್ಯದ ಹಕ್ಕು/ಮರುವಿನ್ಯಾಸದ ಹಕ್ಕು/ಪ್ರಕಟಣೆಯ ಹಕ್ಕು ಮೈಸೂರು ಜಿಲ್ಲಾಡಳಿತದ ಹಕ್ಕಾಗಿರುತ್ತದೆ ಎಂದು ದೃಢೀಕರಿಸುತ್ತೇನೆ.

ಸಹಿ:

ಸ್ಥಳ:
ದಿನಾಂಕ: